**ಒ.ಎಸ್.ನಂಬ್ರಃ 315/2015** **ಡಿ.ಡಬ್ಲ್ಯೂ: 1**

ದಿನಾಂಕಃ 01-03-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಾದ ಶ್ರೀ ವೈ ಎನ್ ಕೆ ರವರಿಂದ

ನಾನು ಪ್ರಥಮ ದರ್ಜೆ ಪಿ ಡಬ್ಲ್ಯೂ ಡಿ ಗುತ್ತಿಗೆದಾರ ಎಂದರೆ ಸರಿ. ನಾನು ಕುಂದಾಪುರದಲ್ಲಿ ವಾಸವಾಗಿರುತ್ತೇನೆ. ವಾದಿ, ಅವರ ಹೆಂಡತಿ ಮತ್ತು ಮಕ್ಕಳ ಪರಿಚಯ ಇಲ್ಲ. ವಾದಿಯರು ಈ ದಾವೆಯನ್ನು ಯಾಕೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಗೆ ಸಂಬಂಧಿಸಿದಂತೆ ಏನೆಲ್ಲಾ ದಾಖಲೆಗಳನ್ನು ವಾದಿಯು ಹಾಜರುಪಡಿಸಿದ್ದಾರೆ ಎಂದು ತಿಳಿದುಕೊಂಡಿಲ್ಲ. ನಾನು ಪ್ರತಿವಾದಿ ಪತ್ರ ಸಲ್ಲಿಸುವಾಗ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ದಾವಾ ಆಸ್ತಿಗಳನ್ನು ಕ್ರಯ ಪತ್ರದ ಮೂಲಕ ನಾನು ಖರೀದಿಸಿರುವುದಾಗಿ ಸಾಧಿಸುತ್ತಿದ್ದೇನೆ ಎಂದರೆ ಸರಿ. ನನಗೆ ಕ್ರಯಕ್ಕೆ ಕೊಟ್ಟವರು ನನ್ನ ಹೆಂಡತಿಯ ತಂದೆ ಜಯರಾಮ ಶೆಟ್ಟಿ. ನನ್ನ ಹೆಂಡತಿಯ ತಂದೆಗೆ ಅವರ ತಂದೆ ಅನಂತ ಶೆಟ್ಟಿಯಿಂದ ಬಂದಿರುತ್ತದೆ. ಅನಂತ ಶೆಟ್ಟಿರವರಿಗೆ ಪಾಲುಪಟ್ಟಿಯ ಮೂಲಕ ಆಸ್ತಿ ಬಂದಿರುತ್ತದೆ.

ನಾನು ಕ್ರಯ ಮಾಡುವ ಪೂರ್ವದಲ್ಲಿ ಆಸ್ತಿಗೆ ಸಂಬಂಧಿಸಿದ ಹಿಂದಿನ ದಾಖಲೆಗಳನ್ನು ಪರಿಶೀಲಿಸಿ ಕಾನೂನು ಸಲಹೆ ಪಡೆದಿರುತ್ತೇನೆ. ಭೂನ್ಯಾಯ ಮಂಡಳಿಯಿಂದ ತಮಗೆ ಬಂದಿರುವುದಾಗಿ ವಾದಿಗಳು ಸಾಧಿಸುತ್ತಿರುವುದಾಗಿ ತಿಳಿದಿಕೊಂಡಿರುತ್ತೇನೆ. ಭೂನ್ಯಾಯ ಮಂಡಳಿಯಿಂದ ವಾದಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಭೂನ್ಯಾಯ ಮಂಡಳಿಯ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ಭೂನ್ಯಾಯ ಮಂಡಳಿಗೆ ಯಾರು ಅರ್ಜಿ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ. ಅನಂತ ಶೆಟ್ಟಿಯವರಿಗೆ ಯಾವ ವರ್ಷದಲ್ಲಿ ಆಸ್ತಿ ಬಂತು ಎಂದು ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಅನಂತ ಶೆಟ್ಟಿರವರಿಗೆ 1959 ರಲ್ಲಿ ಕ್ರಯದ ಮೂಲಕ ಬಂದಿರುವುದಾಗಿ ಹೇಳಲಾಗಿದೆ ಎಂದರೆ ಗೊತ್ತಿಲ್ಲ.

1974 ರಲ್ಲಿ ಅನಂತ ಶೆಟ್ಟಿರವರಿಗೆ ದಾವಾ ಸ್ವತ್ತಿನಲ್ಲಿ ಸಂಪೂರ್ಣ ಹಕ್ಕು ಇತ್ತು ಎಂದರೆ ನನಗೆ ಗೊತ್ತಿಲ್ಲ. 1974 ರ ಪೂರ್ವದಲ್ಲಿ ಬಚ್ಚಿ ಶೆಡ್ತಿ ಎಂಬುವವರು ಅನಂತ ಶೆಟ್ಟಿರವರ ಗೇಣಿದಾರರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. 1974 ರಲ್ಲಿ ಅನಂತ ಶೆಟ್ಟಿರವರು ಬಚ್ಚಿ ಶೆಡ್ತಿರವರಿಗೆ ನಿ.ಪಿ.3 ರ ಪ್ರಕಾರ ದಾವಾ ಸ್ವತ್ತನ್ನು ಕ್ರಯ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಿ.ಪಿ.3 ರ ಕ್ರಯ ಪತ್ರದ ಪ್ರಕಾರ ವಾದಿ ಮತ್ತು ಅವರ ತಾಯಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಭೂಸುಧಾರಣಾ ಕಾಯಿದೆ ಬಂದ ನಂತರ ಭೂನ್ಯಾಯ ಮಂಡಳಿಗೆ ಡಿಕ್ಲೇರೇಷನ ಅರ್ಜಿ ಸಲ್ಲಿಸಿದ್ದು, ಅವರ ಹೆಸರಿಗೆ ದಾವಾ

ಸ್ವತ್ತು ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಗೊತ್ತಾದ ನಂತರ ಭೂನ್ಯಾಯ ಮಂಡಳಿ ಆದೇಶವನ್ನು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸಿಲ್ಲ. ಭೂನ್ಯಾಯ ಮಂಡಳಿ ಆದೇಶವನ್ನು ಪ್ರಶ್ನಿಸದೇ ಇರುವುದರಿಂದ ಅದು ಅಂತಿಮವಾಗಿ ವಾದಿಗೆ ಹಕ್ಕು ಬಂದಿದೆ ಎಂದರೆ ಸರಿಯಲ್ಲ.

ವಾದಿಯರು ನನ್ನ ಹೆಸರಿಗೆ ಖಾತೆ ಬದಲಾವಣೆ ಆಗಿರುವುದನ್ನು ಎಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎಸಿ ನ್ಯಾಯಾಲಯದ ಆದೇಶವನ್ನು ನಾನು ಓದಿ ನೋಡಿಲ್ಲ. ಎಸಿರವರು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಅನಂತ ಶೆಟ್ಟಿರವರು ವಾದಿಯ ತಾಯಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ ನಂತರ ಹಕ್ಕನ್ನು ಕಳೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ವಾದಿಯ ಹೆಸರಿಗೆ ಬದಲಾವಣೆ ಆಗದೇ ಇರುವುದನ್ನು ನಾನು ಮತ್ತು ನನ್ನ ಮಾವ ದುರುಪಯೋಗಪಡಿಸಿಕೊಂಡು ಕ್ರಯ ಮತ್ತು ವಿಭಾಗ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಮಾಡಿಕೊಂಡ ಕ್ರಯಪತ್ರ ಮತ್ತು ವಿಭಾಗ ಪತ್ರ ಮೋಸದ ದಾಖಲೆಗಳಾಗಿದ್ದು, ಅವುಗಳಿಗೆ ಕಾನೂನಿನ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಮೇಲೆ ವಾದಿಯ ಮೇಲೆ ಸಂಪೂರ್ಣ ಹಕ್ಕು ಇದ್ದು, ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯರು ದಾವೆಯಲ್ಲಿ ಕೇಳಿರುವ ಪರಿಹಾರ ಕೇಳಲು ಅರ್ಹರು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**